ವಾರದ ಪತ್ರ

## ವಾಸ್ತವ ಮರೆಯಾಗದಿರಲಿ

ಕಲರ್ಸ್ ಕನ್ನಡದ 'ಗೀತಾ'ದಲ್ಲಿ ಒಬ್ಬ ಜವಾಬ್ದಾರಿ ಸಚಿವರ ಮನೆಯಲ್ಲಿ ಕೆಲಸಕ್ಕೆ ಸಿಬ್ಬಂದಿ ಇಲ್ಲ. ಸಿಸಿಟೀವಿ ಇದ್ದರೂ ಬಳಸದೇ ಇರುವುದು, ಸಚಿವರ ಪತ್ನಿ ಮನೆಯಲ್ಲಿ ಇದ್ದುಕೊಂಡೇ ಗೀತಾಳ ವಿರುದ್ಧ ನಡೆಸುವ ಸಂಚು ಸಚಿವರ ಗಮನಕ್ಕೆ ಬರುವುದಿಲ್ಲ. ಸಚಿವರ ಪತ್ನಿಯ ಅಣ್ಣ ವಿದೂಷಕನ ತರಹ ವಿಚಿತ್ರ ಅಂಗ ಚೇಷ್ಟೆ ಮಾಡುತ್ತ ತಂಗಿಗೆ ಮಾಡುವ ಸಹಾಯ ಎಲ್ಲವೂ ವಿಫಲವಾಗುತ್ತವೆ. ಇಂತಹ ಘಟನೆಗಳು ಸಚಿವರ ಗಮನಕ್ಕೆ ಬಾರದೆ ಇರುವುದು, ಗೀತಾಳ ಹೆತ್ತ ತಂದೆಯೇ ಮಗಳ ವಿರುದ್ಧ ಸಂಚು ನಡೆಸುವುದು ಎಂತಹ ವಿಪರ್ಯಾಸ.

—ಎಂ.ಟಿ. ರಮಾನಂದ ರೆಡ್ಡಿ ಮದಕರಿಪುರ

## ಮಹಾಪುರುಷರ ಕಥೆ ದಾರಿದೀಪ

ದ್ವೇಷ, ಅಸೂಯೆ, ಕ್ರೌರ್ಯ, ಸಲ್ಲದ ಅಲಂಕಾರ ಇಲ್ಲದ ಅಪರೂಪದ ಧಾರಾವಾಹಿ ಸ್ಟಾರ್ ಸುವರ್ಣದ 'ಎಡೆಯೂರು ಸಿದ್ದಲಿಂಗೇಶ್ವರ', ಅದರಲ್ಲೂ ಇತ್ತೀಚಿನ ಮಹಾಯೋಗಿ ಬಸವಣ್ಣನವರಿಂದ ಸಿದ್ದಲಿಂಗೇಶ್ವರಗೆ ನೀಡಿದ ಉಪದೇಶ ಮಹತ್ವಪೂರ್ಣವಾಗಿದೆ. ಈ ತರಹದ ಮಹಾಪುರುಷರ ವಿಷಯಗಳನ್ನು ಹೆಚ್ಚಾಗಿ ಕನ್ನಡ ವಾಹಿನಿಗಳು ಅಳವಡಿಸಿಕೊಂಡರೆ ಯುವಜನಾಂಗಕ್ಕೆ ದಾರಿದೀಪವಾಗಬಹುದು. ಕಲರ್ಸ್‌ನ 'ಮಂಗಳಗೌರಿ' ಧಾರಾವಾಹಿ ಪ್ರಾರಂಭವಾದಾಗ ಮದುವೆಯಾದವರಿಗೆ ಮಕ್ಕಳಾಗಿ ಅವರು ಶಾಲೆಗೆ ಹೋಗುತ್ತಿದ್ದಾರೆ, ಈ ಕಥೆಯನ್ನು ಮಾತ್ರ ಹಿಗ್ಗಾಮುಗ್ಗಾ ಎಳೆದಾಡುತ್ತಿದ್ದಾರೆ.

—ಕಮಲಾದೇವಿ ರಾಜಶೇಖರ್ ಹಳ್ಳೂರ್

## ವೀಕ್ಷಕ ನ್ಯಾಯ ಬಯಸುತ್ತಾನೆ

ಕಲರ್ಸ್ ಕನ್ನಡದ 'ಮಂಗಳ ಗೌರಿ' ಈ ಧಾರಾವಾಹಿ ಮೂಲಕ ನಿರ್ದೇಶಕರು ವೀಕ್ಷಕರ ತಾಳ್ಮೆಯನ್ನು ಇನ್ನೂ ಪರೀಕ್ಷೆ ಮಾಡುತ್ತಿದ್ದಾರೆ. ಇನ್ನೇನು ಸುಖಾಂತ್ಯ ಆಗುತ್ತದೆ ಎಂದು ನೆಮ್ಮದಿ ನಿಟ್ಟುಸಿರು ಬಿಡುವ ಹೊತ್ತಿಗೆ ಮತ್ತೆ ಇನ್ನೊಂದು ಟ್ವಿಸ್ಟ್. ನಿಜವಾಗಿ ನಿರ್ದೇಶಕರ ಜಾಣ್ಮೆ ಹಾಗೂ ಕಲ್ಪನೆಯನ್ನು ಮೆಚ್ಚಲೇ ಬೇಕು. ಆದರೆ ಯಾವಾಗಲೂ ಪ್ರೇಕ್ಷಕರು ನಿರೀಕ್ಷಿಸುವುದು ಸತ್ಯ–ಧರ್ಮಕ್ಕೆ ನ್ಯಾಯ ಬೇಗ ಸಿಗಬೇಕು. ದುಷ್ಟರಿಗೆ ಶಿಕ್ಷೆ ಆಗಲೇಬೇಕು ಎಂದು ಆಶಿಸುತ್ತಾರೆ.

—ರಮಾಬಾಯಿ ನರಗುಂದ, ಬಾಗಲಕೋಟೆ

## ಇದೊಂತರ ಡಕೋಟಾ ಎಕ್ಸ್‌ಪ್ರೆಸ್

ಹಳೆಯ ದೃಶ್ಯಗಳ ಪುನರಪಿ ನರ್ತನ, ಪೇಲವ ಹಾಸ್ಯಗಳಿಂದ ಆರಂಭದಲ್ಲಿ 'ದಿ ಬರ್ನಿಂಗ್ ಟ್ರೇನ್'ನಂತೆ ಕುತೂಹಲ ಹುಟ್ಟಿಸಿದ್ದ ಝೀ ಕನ್ನಡದ ಧಾರಾವಾಹಿ 'ಸತ್ಯ' ಇದೀಗ 'ಡಕೋಟ ಎಕ್ಸ್‌ಪ್ರೆಸ್'ನಂತಾಗಿದೆ. ಹಲವು ವಾರಗಳಿಂದ ಕಾಲು ಮುರಿದಂತೆ ನಿಂತಲ್ಲೇ ನಿಂತಿದೆ. ಕಥೆಯಲ್ಲಿ ಆಗಾಗ ರಸ್ತೆಯಲ್ಲಿನ ಹೋರ್ಡಿಂಗ್ ಮೂಲಕ ಜಾಹೀರಾತು ಪ್ರದರ್ಶನ. ನಾಯಕಿ ಕೈಯಲ್ಲಿ ವಿಕ್ಸ್ ಬಾಟಲಿ ಹಿಡಿದು ಹೊಗಳುವ ದೃಶ್ಯ ಮಾತ್ರ ಹೆಚ್ಚುವರಿಯಾಗಿ ಒಳಗೊಂಡಿದೆ.

ಇದೇ ವಾಹಿನಿಯ ಇನ್ನೊಂದು ಧಾರಾವಾಹಿ 'ಹಿಟ್ಲರ್ ಕಲ್ಯಾಣ' ದಿಲೀಪ್ ಅವರ ಪ್ರಬುದ್ಧ ಅಭಿನಯ, ದಾವಣಗೆರೆ ಬೆಣ್ಣೆ ಮೊಗದ ನಾಯಕಿಯ ನಟನೆ, ಸಂಭಾಷಣೆ ಮೆಚ್ಚುಗೆ ಆಗಿದೆ. ವಿಶೇಷವೆಂದರೆ ನೋಡುವಾಗ ಎಲ್ಲಿಯೂ ಚೂಯಿಂಗ್ ಗಮ್ ಅಥವಾ ವಿಕ್ಸ್ ನೆನಪಾಗುವುದಿಲ್ಲ.

—ಕೆ. ಶ್ರೀನಿವಾಸರಾವ್ ಹರಪನಹಳ್ಳಿ

## ಸುದ್ದಿಗೆ ಮೆಚ್ಚುಗೆಯೂ ಇರಲಿ

ಕನ್ನಡ ನ್ಯೂಸ್ ಚಾನೆಲ್‌ಗಳ ಸುದ್ದಿಯ ವೈಖರಿಯ ಬಗ್ಗೆ ಇತ್ತೀಚೆಗೆ ಸಾರ್ವತ್ರಿಕವಾಗಿ ಟೀಕೆಗಳು ವ್ಯಕ್ತವಾಗುತ್ತಿವೆ. ಯಾವುದಾದರೂ ಒಂದು ವಿಷಯ ಸಿಕ್ಕರೆ ಸಾಕು. ಬೆಳಿಗ್ಗೆಯಿಂದ ಸಂಜೆವರೆಗೂ ಅದನ್ನೇ ಜಾಲಾಡಿ ಬಿಡುತ್ತಾರೆ. ಅದನ್ನು ಹೊರತಾಗಿ ಹೊಸ ಸುದ್ದಿ ಹಾಗೂ ಮಾಹಿತಿಯನ್ನು ನೀಡುವಂತಹ ಕೆಲಸವನ್ನು ಮಾಡುವುದಿಲ್ಲ ಎಂದು ಸಾಮಾನ್ಯವಾಗಿ ಆರೋಪಿಸುತ್ತೇವೆ.

ಆದರೆ, ಹೇಳಿ ಕೇಳಿ ಇದು ಸ್ಪರ್ಧಾಯುಗ .ಇದಕ್ಕೆ ಟೀವಿ ನ್ಯೂಸ್ ಚಾನಲ್‌ಗಳು ಹೊರತಾಗಿಲ್ಲ. ಪ್ರವಾಹ, ಭೂಕುಸಿತದಂತಹ ಪ್ರಾಕೃತಿಕ ಅವಘಡಗಳು ಸಂಭವಿಸಿದಾಗ; ಅಂತಹ ವಿಷಮ ಪರಿಸ್ಥಿತಿಗಳಲ್ಲಿ ಆ ಸ್ಥಳಕ್ಕೆ ಹೋಗಿ ಜನರ ಸಮಸ್ಯೆಗಳನ್ನು ಆಲಿಸಿ ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಚುರುಕು ಮುಟ್ಟಿಸುವಂತಹ ಶ್ಲಾಘನೀಯ ಕೆಲಸಗಳನ್ನು ಮಾಡುತ್ತಿವೆ. ಸಾರಾಸಗಟಾಗಿ ಎಲ್ಲವನ್ನೂ ವಿರೋಧಿಸುವುದು ಸರಿಯಲ್ಲವೇನೋ?

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಈ ಎಳೆತವ ತಾಳೆವ



ವೀಕ್ಷಕರಿಂದ ಹೊಗಳಿಕೆಗೆ ಪಾತ್ರವಾಗಿದ್ದ 'ಕನ್ನಡತಿ' ಕ್ರಮೇಣ ಹಳಿ ತಪ್ಪಿ ಉಳಿದ ಧಾರಾವಾಹಿಗಳ ಜಾಡು ಹಿಡಿಯುತ್ತಿದೆ. ಕಥೆಯನ್ನು ವಿನಾಕಾರಣ ಎಳೆಯುತ್ತಿದ್ದಾರೆ ಎಂದು ವೀಕ್ಷಕರು ಭಾವಿಸತೊಡಗಿದ್ದಾರೆ. ಹೊಸ ಮಾದರಿ ಕಥೆ ಎಂದೆನಿಸಿಕೊಂಡಿತ್ತು. ಏಕೆಂದರೆ ಇದರಲ್ಲಿ ಅತ್ತೆ – ಸೊಸೆ ಶೀತಲ ಯುದ್ಧ, ಆಸ್ತಿಗಾಗಿ ಕಲಹ, ಕಾರ್ಪೊರೇಟ್ ಸೆಣಸಾಟ, ಭೂಗತ ಲೋಕದ ನಂಟು, ಮಾಟ– ಮಂತ್ರ, ಪ್ರೇಮಿಗಳ ಅರಳದ ಪ್ರೇಮ ವೃಥಾ ಮುನಿಸಿನಂತಹ ಸಿದ್ಧ ಸೂತ್ರದ ಸುಳಿಯಲ್ಲಿ ಸಿಕ್ಕಿ ಕಥೆಗೆ ಅನವಶ್ಯಕ ತಿರುವು ನೀಡಿ ಎಳೆಯಲಾಗುತ್ತಿದೆ. 'ಈ ಮೌನವ ತಾಳೆನು' ಎನ್ನುವಂತೆ ಈ ಎಳೆತವ ತಾಳೆವು ಎನ್ನುತ್ತಲೇ ಸಹಿಸಿಕೊಳ್ಳುವಂತೆ ಆಗಿದೆ.

—ರಮಾನಂದ ಶರ್ಮಾ, ನವದೆಹಲಿ

## ಗುಲಗಂಜಿಗೆ ಚುಕ್ಕೆ ಇದ್ದಂತೆ

ಕಲರ್ಸ್ ಕನ್ನಡದ 'ಕನ್ನಡತಿ' ಒಳ್ಳೆಯ ಧಾರಾವಾಹಿ. ಅದು ಅತ್ಯುತ್ತಮ ಸಂಭಾಷಣೆ, ಪ್ರಬುದ್ಧ ಅಭಿನಯ, ಕೊನೆಯಲ್ಲಿ 'ಸರಿಗನ್ನಡಂಗೆಲ್ಗೆ' ಕಾರಣಕ್ಕೆ ಮೆಚ್ಚುಗೆ ಆಗುತ್ತದೆ. ಇಷ್ಟೆಲ್ಲ ಉತ್ತಮ ಅಂಶಗಳಿದ್ದರೂ ಗುಲಗಂಜಿಗೆ ಕಪ್ಪು ಚುಕ್ಕೆಯಿರುವಂತೆ ವರೂಧಿನಿಯ, ವಸ್ತ್ರಾಲಂಕಾರ, ಕೇಶಾಲಂಕಾರ ಮತ್ತು ವೇಷಭೂಷಣ ನೋಡಲು ಮುಜುಗರವೆನಿಸುತ್ತದೆ.

—ಸಿ.ಆರ್. ಶ್ರೀನಿವಾಸ, ಬೆಂಗಳೂರು

## ಜಾಡಿನಿಂದ ಜಾರಿದೆ

ಕನ್ನಡತಿ ಒಮ್ಮೊಮ್ಮೆ ಕಥೆಯ ಜಾಡನ್ನು ಬಿಟ್ಟು ಎಲ್ಲೋ ಗಿರಕಿ ಹೊಡೆದಂತೆ ಭಾಸವಾಗುತ್ತಿದೆ. ತಾಪ್ಪಿಯವರ ಕೋಪ ಶಮನ ಮಾಡಲು, ಅವರಿಗೆ ಸನ್ಮಾನ ಮಾಡುವುದು ಮೂಲ ಕಥೆಯಲ್ಲಿ ಏನೋ ತುರುಕಿದಂತೆ ಕಾಣಿಸುತ್ತದೆ. ಇಡೀ ಧಾರಾವಾಹಿಯಲ್ಲಿ ಅವರು ಒಮ್ಮೆಯೂ ಡಾಕ್ಟರ್ ರೀತಿ ಕಂಡಿಲ್ಲ. ಒಮ್ಮೆ ಆದರೂ ರೋಗಿಗಳಿಗೆ ಸಲಹೆ ಅಥವಾ ಚಿಕಿತ್ಸೆ ಕೊಟ್ಟಿದ್ದನ್ನು ತೋರಿಸಿ, ಆಮೇಲೆ ಅವರಿಗೆ ಪ್ರಶಸ್ತಿ, ಅವರನ್ನು ಹೊಗಳಿಕೆ ಮಾಡಿದ್ದನ್ನು ತೋರಿಸಬಹುದಿತ್ತು. ಇವತ್ತಿನ ಕಂತು ಅವರ ಕೋಪವನ್ನು ತಕ್ಷಣ ಶಮನ ಮಾಡಲು ಹೊರಟಂತಿದೆ. ಹೀಗಾಗಿ ಕಥೆಯ ದಿಕ್ಕು ತಪ್ಪಿದಂತಾಗುತ್ತದೆ.

—ನಾಡಿಗ್ ರಾಮಚಂದ್ರ, ಬೆಂಗಳೂರು